ಸಾಲುಗಳ ಮೇಲೆ ಹಾರಾಡುತ್ತಿದ್ದ ಬೆಳ್ಳಕ್ಕಿಗಳ ಸಾಲು, ಎಲೆತೋಟಕ್ಕೆ ನೀರು ಹಾಯಿಸುವಾಗ ಕೇಳಿ ಬರುತ್ತಿದ್ದ ಎಟ್ರಪಾಟು, ವಡವೆಟ್ಟಲ್ಲೈ ವದಂಗಾವೆಟ್ಟಲ್ಲೈ ಎಲ್ಲ ಪಾಟ್ಟುಗಳು ನೆನಪಾದವು! ಅದೆಲ್ಲ ಕಳೆದುಹೋದ ದಿನಗಳ ರಸಭರಿತ ಗಳಿಗೆಗಳು'

ಎಲ್ಲ ಕಾಲದಲ್ಲೂ ಕೈ ಹಿಡಿದಿದ್ದ ತಮ್ಮ ಪ್ರೀತಿಯ ಕಾಂಚೀಪುರದ ಆ ಹೊಂಬಣ್ಣದ ದಿನಗಳು ಮರೆಯಾಗಿದ್ದವು. ಈಗ ಎಲ್ಲರ ಪ್ರಾರ್ಥನೆಯೂ ಒಂದೇ, ಮಳೆಯ ತೋರಣದೊಂದಿಗೆ ವಸಂತ ಮರಳಿ ಬರಲಿ ಕಾಂಚೀಪುರಕ್ಕೆ ಎಂದು.

ಅವರು ಮಣಿಮೇಕಲೆಯನ್ನು ಕಂಡು, ಅವಳನ್ನು ಕಾಂಚೀಪುರಕ್ಕೆ ಕರೆದುಕೊಂಡು ಹೋಗುವವರೆಗೂ ವಿರಮಿಸಬಾರದೆಂದು ನಿರ್ಧರಿಸಿದ್ದರು. ಚೈತ್ರ ಹುಣ್ಣಿಮೆಯ ಮರುದಿನದ ಇಳಿಗತ್ತಲಿನಲ್ಲಿ ಅವರು ಪುಹಾರ್‌ಗೆ ಕಾಲಿಟ್ಟರು. ಮಣಿಮೇಕಲೆಯಿದ್ದ ವಿಹಾರಕ್ಕೆ ಅವರು ಬಂದಾಗ....

* * *

ಸಂಜೆಯಾಗಿತ್ತು. ವಿಹಾರದಲ್ಲಿ ಅರವಣ ಅಡಿಗಳು ಎಣ್ಣೆಯ ನಾಳಿಯಿಂದ ದೀಪಗಳಿಗೆ ಎಣ್ಣೆ ಬಿಡುತ್ತಿದ್ದರು. ಮಾಧವಿ ಅಲ್ಲಿದ್ದ ದೀಪಗಳನ್ನು ಹಚ್ಚುತ್ತಿದ್ದಳು. ಸುಧಾಮತಿ ಮಾಧವಿಗೆ ಸಹಕರಿಸುತ್ತಿದ್ದಳು. ಕೆಲವು ದೀಪಗಳು ಹೆಚ್ಚು ಪ್ರಜ್ವಲಿಸುತ್ತಿದ್ದವು. ಕೆಲವು ದೀಪಗಳು ಸಣ್ಣಗೆ ಉರಿಯುತ್ತಿದ್ದವು. ಇನ್ನೂ ಕೆಲವು ಹಚ್ಚಿದ ಕೂಡಲೆ ಗಾಳಿಗೆ ಆರಿಹೋಗುತ್ತಿದ್ದವು. ಇದನ್ನೆಲ್ಲಾ ನೋಡುತ್ತಿದ್ದ ಅರವಣ ಅಡಿಗಳು ಮಾಧವಿಗೆ 'ಈ ದೀಪಗಳಂತೆಯೇ ಲೋಕದ ಜೀವಿಗಳು. ಕೆಲವು ಪ್ರಜ್ವಲಿಸುತ್ತವೆ, ಕೆಲವು ಸಣ್ಣಗೆ ಉರಿದು ನಂದಿ ಹೋಗುತ್ತವೆ, ಮತ್ತೂ ಕೆಲವು ಹತ್ತಿದ ಕೂಡಲೇ ಗಾಳಿಗೆ ಆರಿಹೋಗುತ್ತವೆ!' ಎಂದು ಹೇಳಿದರು. ಗುರುವಿನ ಮಾತನ್ನು ಕೇಳಿದ ಮಾಧವಿ ಮತ್ತು ಸುಧಾಮತಿ 'ಅರ್ಥವಾಯಿತು ಗುರುಗಳೆ' ಎಂದು ಹೇಳಿ ಮತ್ತೆ ದೀಪ ಬೆಳಗುವುದರಲ್ಲಿ ತಲ್ಲೀನರಾದರು. ವಿಹಾರದಲ್ಲಿ ದೀಪಗಳು ನಿಧಾನವಾಗಿ ಬೆಳಗತೊಡಗಿದವು.

ಕೆಲವು ಹೊತ್ತಿನ ನಂತರ ಒಂದು ಸಣ್ಣ ಗುಂಪು ವಿಹಾರಕ್ಕೆ ಬಂದಿತು. ನಡೆದು ತುಂಬಾ ದಣಿದಿದ್ದರಿಂದ ಅವರೆಲ್ಲಾ ಅಲ್ಲಿನ ಮರದ ಕೆಳಗೆ ಅಲ್ಲಲ್ಲಿ ಕುಳಿತರು. ಮಾಧವಿ ಅವರನ್ನು ನೋಡಿ 'ತಾವೆಲ್ಲಾ ದಣಿದಿದ್ದೀರಿ, ಮೊದಲು ನೀರು ಕುಡಿದು ಸುಧಾರಿಸಿಕೊಳ್ಳಿ' ಎಂದು ಹೇಳಿ ಸುಧಾಮತಿಯ ಕಡೆಗೆ ತಿರುಗಿದಳು. ಸುಧಾಮತಿ ಕೂಡಲೇ ಒಳಗೆ ಹೋಗಿ ಎಲ್ಲರಿಗೂ ನೀರು ತಂದುಕೊಟ್ಟಳು. ಅಲ್ಲಿದ್ದ ಕೆಲವು ಬಿಕ್ಕುಗಳೂ ಅತಿಥಿಗಳಿಗೆ ನೀರು ತಂದುಕೊಟ್ಟರು.

ಅರವಣ ಅಡಿಗಳು ಮುಂದೆ ಬಂದು 'ತಾವೆಲ್ಲಾ ಎಲ್ಲಿಂದ ಬಂದಿರಿ ಬಂಧುಗಳೇ?' ಎಂದು ಕುಳಿತಿದ್ದವರನ್ನು ಕೇಳಿದರು.

ಅವರಲ್ಲೊಬ್ಬ ಎದ್ದುನಿಂತು ಗುರುಗಳಿಗೆ ನಡುಬಾಗಿ ನಮಸ್ಕರಿಸಿ 'ಅಯ್ಯಾ, ನಾವು ಕಾಂಚೀಪುರದಿಂದ ಬಂದಿರುವವರು. ನಮ್ಮ ರಾಜ್ಯದಲ್ಲಿ ಮಳೆ-ಬೆಳೆಯಾಗದೆ ಬರ ಬಂದಿದೆ. ದನಕರುಗಳಿಗೆ ಮೇವು ಇಲ್ಲ, ಹಸುಮಕ್ಕಳಿಗೆ ಒಂದು ಮಿತ್ತಿಗೆ ಅನ್ನವಿಲ್ಲ, ಇನ್ನು ವಯಸ್ಸಾದವರು ಮತ್ತು ಹೆಂಗಸರ ಪಾಡಂತೂ ಹೇಳತೀರದಾಗಿದೆ! ನಮ್ಮ ನಗರದ ಎಲ್ಲ ಹಳ್ಳಗಳು, ಕೆರೆ-ಬಾವಿಗಳು ಬತ್ತಿಹೋಗಿವೆ. ಅನ್ನದ ಮುಖ ಕಾಣದೆ ಜನ ತತ್ತರಿಸುತ್ತಿದ್ದಾರೆ. ನಮ್ಮ ರಾಜನೂ ಕೈಸೋತಿದ್ದಾನೆ. ಅದಕ್ಕಾಗಿ ಮಣಿಮೇಕಲೆಯನ್ನು ನಮ್ಮ ರಾಜ್ಯಕ್ಕೆ ಕರೆದುಕೊಂಡು ಹೋಗೋಣವೆಂದು ಬಂದಿದ್ದೇವೆ' ಎಂದು ಹೇಳಿದ. ಅವನ ಮಾತುಗಳು ದೈನ್ಯತೆಯಿಂದ ಕೂಡಿದ್ದವು.

'ಬಂಧುಗಳೇ ನೀವು ಬಹಳ ಹಸಿದು ಬಂದಿದ್ದೀರಿ, ಮೊದಲು ಊಟ ಮಾಡಿ. (ವಿಹಾರದ ಒಂದು ಬದಿಯಲ್ಲಿದ್ದ ಕೊಳವನ್ನು ತೋರಿಸುತ್ತಾ), ಅಗೋ ಆ ಕೊಳದ ಬಳಿ ಅನ್ನದ ಅಕ್ಷಯ ಪಾತ್ರೆ ಇದೆ. ಅದರೊಳಗಿನಿಂದ ಅನ್ನವನ್ನು ಮೊಗೆದುಕೊಂಡು ಊಟ ಮಾಡಿ. ನಂತರ ಉಳಿದಿದ್ದನ್ನು ಮಾತನಾಡೋಣ' ಎಂದು ಅರವಣ ಅಡಿಗಳು ಕಾಂಚೀಪುರದ ಅತಿಥಿಗಳಿಗೆ ಹೇಳಿದರು.

ಅವರಲ್ಲೊಬ್ಬ ಎದ್ದುನಿಂತು 'ಅಯ್ಯಾ, ಕ್ಷಮಿಸಿ. ಮಣಿಮೇಕಲೆಯನ್ನು ಕರೆದುಕೊಂಡು ನಮ್ಮ ಬರದ ನಾಡಿಗೆ ಹೋಗುವವರೆಗೂ ಏನನ್ನೂ ಸೇವಿಸುವುದಿಲ್ಲ. ನಾವು ಮೊದಲು ಮಣಿಮೇಕಲೆಯನ್ನು ನೋಡಬೇಕು, ಆ ಅನ್ನ ದೇವತೆ ಎಲ್ಲಿ?'

ನಮ್ಮ ಕಾಲಿಗಂಟಿದ ದೂಳು ಅಡುಗವನಕ
ಕಾಂಚೀಪುರದ ಒಡಲ ಬೆಂಕಿ ನೀಗುವನಕ
ದನಕರುಗಳ ಸಾವು ನಿಲ್ಲದನಕ